ಸಹಕಾರ ಸಂಘ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಕೊಡಬೇಕಾಗಿರುವ ಸಹಾಯ ಧನ

163 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಮಟ್ಟದಲ್ಲಿ ಸಹಕಾರ ಸಂಘಗಳಾದ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘ ಹಾಗೂ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಕೊಡಬೇಕಾಗಿರುವ ಸಹಾಯಧನ (ಸಬ್ಸಿಡಿ) ಬಾಕಿ ಇರುವುದು ನಿಜವೇ? ಹಾಗಿದ್ದಲ್ಲಿ ಎಷ್ಟಿದೆ?

ಆ) ಇದರಿಂದ ಸಹಕಾರ ಸಂಘಗಳ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳ ಅಭಿವೃದ್ಧಿ ಕಾರ್ಯವು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಈ) ಹಾಗಿದ್ದಲ್ಲಿ ಸಹಾಯಧನದ ಮೊತ್ತವನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) :

ಅ) ಹೌದು. ತಾಲ್ಲೂಕು ವ್ಯವಸಾಯ ಉತ್ಪನ್ನ ಸಹಕಾರ ಮಾರಾಟ ಸಂಘಗಳಿಗೆ ಸುಮಾರು ರೂ. 6.00 ಕೋಟಿ. ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಬಾಕಿ ಇಲ್ಲ.

ಆ) ಹೌದು

ಇ) ಹಣ ಬಿಡುಗಡೆಗಾಗಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಹಾಗೂ ಆರ್ಥಿಕ ಇಲಾಖೆಯೊಂದಿಗೆ ವ್ಯವಹರಿಸಲಾಗಿದೆ.

ಈ) ಆದಷ್ಟು ಬೇಗ ಬಿಡುಗಡೆ ಮಾಡಲಾಗುವುದು.

ಅರಣ್ಯ ಸಂಪತ್ತನ್ನು ಕಳ್ಳಸಾಗಾಣಿಕೆ ಮಾಡುವ ವಾಹನಗಳನ್ನು ವಶಪಡಿಸಿಕೊಂಡಿರುವ ಬಗ್ಗೆ.

164 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಅರಣ್ಯ ಸಂಪತ್ತನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದಾಗ ವಶಪಡಿಸಿಕೊಂಡಿರುವ ವಾಹನಗಳ ಸಂಖ್ಯೆ ಎಷ್ಟು?

2) ಅಂತಹ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

3) ಹಾಗಿದ್ದಲ್ಲಿ, ಈ ವಾಹನಗಳನ್ನು ಹರಾಜು ಮಾಡುವ ಮೂಲಕ ಬಂದ ಹಣವನ್ನು ಇಲಾಖೆಯ ಲೆಕ್ಕದಲ್ಲಿ ಸಂದಾಯ ಮಾಡಲಾಗಿದೆಯೇ, ಹಾಗೂ ಸಂದಾಯ ಮಾಡಿದ ಮೊತ್ತವೆಷ್ಟು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

1) ಇಲಾಖೆಯಲ್ಲಿ ಅರಣ್ಯ ಅಪರಾಧಗಳಲ್ಲಿ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

1)	1987-88	-	1394
2)	1988-89	-	2902
3)	1989-90	-	969

4) 1990-91 1769

(ದಿನಾಂಕ 31-12-90ರ ವರೆಗೆ)

2) ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71 (ಎ) ಪ್ರಕಾರ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ.

3) ವಶಪಡಿಸಿಕೊಳ್ಳಲಾದ ವಾಹನಗಳ ಪೈಕಿ ಕಾನೂನು ರೀತ್ಯ (ಮೊಕದ್ದಮೆಯ ತೀರ್ಪಿನಂತೆ) ಮೂರು ವರ್ಷಗಳಲ್ಲಿ 863 ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಮಾಡಿದುದರಿಂದ ಬಂದ ಹಣವನ್ನು ಇಲಾಖೆಯ ಲೆಕ್ಕದಲ್ಲಿ ಸಂದಾಯ ಮಾಡಲಾಗಿದೆ. ಹಾಗೂ ಒಟ್ಟು ಮೊತ್ತ 69,61,819.60 ಆಗಿರುತ್ತದೆ.

ಕಳ್ಳಸಾಗಾಣಿಕೆ ಮಾಡಲಾದ ಶ್ರೀಗಂಧದ ಮರಗಳನ್ನು ವಶಪಡಿಸಕೊಂಡಿರುವ ಬಗ್ಗೆ

165 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಣ್ಯ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಶಪಡಿಸಿಕೊಂಡ ಕಳ್ಳ ಸಾಗಾಣಿಕೆ ಶ್ರೀಗಂಧದ ಮರದ ಪ್ರಮಾಣವೆಷ್ಟು? ಹಾಗೂ ಅದರ ಮೌಲ್ಯವೆಷ್ಟು?*

ಆ) *ಇದರಿಂದ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಪ್ರಮಾಣ 1289 ಟನ್ ಅಂದಾಜು ಮೌಲ್ಯ ರೂ.8.24 ಕೋಟಿ.

ಆ) ಶ್ರೀಗಂಧದ ಕಳ್ಳಸಾಗಾಣಿಕೆಯ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು 22 ಅರಣ್ಯ ಸಂಚಾರಿ ದಳಗಳನ್ನು ನೇಮಿಸಿದೆ. ಅವುಗಳಿಗೆ ವೈರ್‌ಲೆಸ್ ಉಪಕರಣಗಳನ್ನು ಅಳವಡಿಸಿರುವ ವಾಹನಗಳನ್ನು ಒದಗಿಸಲಾಗಿದೆ. ಜೊತೆಗೆ ರಾಜ್ಯದಲ್ಲಿ ಈಗಾಗಲೇ 161 ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದ್ದು ರಾಜ್ಯದಲ್ಲಿ ಈಗ 231 ನಿಯಂತ್ರಿಕ ನಿಸ್ತಂತು ಉಪಕರಣಗಳು, 146 ಚಲಿಸುವ ನಿಸ್ತಂತು ಉಪಕರಣಗಳು ಮತ್ತು 207 ವಾಕಿ ಟಾಕಿ ಯಂತ್ರಗಳನ್ನು ಕಳ್ಳಸಾಗಾಣಿಕೆ ತಡೆಗಟ್ಟಲು ಉಪಯೋಗಿಸುತ್ತಿದೆ.

ಕಳ್ಳಸಾಗಾಣಿಕೆಯ ಬಗ್ಗೆ ಸುಳಿವು ನೀಡಿದವರಿಗೆ ಗುಪ್ತ ಸೇವಾ ನಿಧಿ ಯೋಜನೆಯಿಂದ ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ. ಕಳ್ಳಸಾಗಾಣಿಕೆಯಲ್ಲಿ ತೊಡಗಿದ ವ್ಯಕ್ತಿಯನ್ನು ಮಾಲಿನ ಸಹಿತ ಬಂಧಿಸಿದವರಿಗೆ ಮಾಲಿನ ಮೌಲ್ಯದ ಶೇಕಡ 15ರವರವಿಗೆ ಒಟ್ಟು ಮೊತ್ತ ರೂ. 10,000-00 ಕ್ಕೆ ಮೀರದಂತೆ ಬಹುಮಾನ ಕೊಡಲಾಗುತ್ತದೆ. ಅತೀವ ಧೈರ್ಯ ಸಾಹಸ ತೋರಿದವರಿಗೆ ಪಾರಿತೋಷಕಗಳನ್ನು ನೀಡಲಾಗುತ್ತದೆ. ಕರ್ನಾಟಕ ಕೇರಳ ತಮಿಳುನಾಡು ಗಡಿ ಪ್ರದೇಶಗಳು ಆಯಕಟ್ಟಿನ ಪ್ರದೇಶಗಳಲ್ಲಿ ವೈರ್‌ಲೆಸ್ ಠಾಣೆಗಳನ್ನು ನಿರ್ಮಿಸಲಾಗಿದೆ. ಗಡಿ ಪ್ರದೇಶಗಳಲ್ಲಿ ಹಗಲು ರಾತ್ರಿ ಗಸ್ತು ತಿರುಗಿ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಅನುಕೂಲವಾಗುವಂತೆ ರಕ್ಷಣಾ ಸಿಬ್ಬಂದಿಯವರನ್ನು ನೇಮಿಸಿ ಅವರಿಗೂ ಕೂಡ ವಾಕಿ-ಟಾಕಿ ಉಪಕರಣಗಳನ್ನು ಒದಗಿಸಲಾಗಿದೆ.

ಅರಣ್ಯ ಇಲಾಖೆಯ ಸಿಬ್ಬಂದಿಯವರೂ ಅಲ್ಲದೆ ಪೋಲೀಸ್ ಇಲಾಖೆಯ ಡಿ.ಐ.ಜಿ.ಯವರ ನೇತೃತ್ವದಲ್ಲಿ ಪೋಲೀಸ್ ಸಿಬ್ಬಂದಿಯವರೂ ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ತಡೆಯಲು ಶ್ರಮಿಸುತ್ತಿದ್ದಾರೆ.